ಪ್ರಧಾನ/ ಹೆಚ್ಚುವರಿ ದಿವಾಣಿ ಮತ್ತು ಜೆ ಎಂ ಫ್ ಸಿ ನ್ಯಾಯಾಲಯ ಜಮಖಂಡಿ

ಸಿ.ಸಿ.ನಂ-496/2015

1-ಕರ್ನಾಟಕ ಸರ್ಕಾರ ...ಫಿರ್ಯಾದಿ

ವಿರುದ್ಧ

ಆರೋಪಿಯ ಹೆಸರು : 1-ಮೌಲಾಸಾಬ ಬಾಶಾಸಾಬ ಅತ್ತಾರ. ವಃ 22,
2-ಬಾಶಾಸಾಬ ಗುಡುಸಾಬ ಅತ್ತಾರ. ವಃ 47,
3-ಮಹಾದೇವ ಪುಂಡಲೀಕ ಐಗಳಿ. ವಃ 40,

ಉದ್ಯೋಗ : ಒಕ್ಕಲುತನ,

ವಾಸಸ್ಥಳ : ಸಾಃ ಬೋಳ ಚಿಕ್ಕಲಕಿ, ತುಂಗಳ, ತಾಃ ಜಮಖಂಡಿ. --- ಆರೋಪಿತರು

ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ರ ಅಡಿ ಆಪಾದನೆ

ದಿಃ 13-01-14 ರಂದು ಮಧ್ಯಾಹ್ನ 2-15 ಗಂಟೆಗೆ ಸಾವಳಗಿ ಪೋ.ಠಾ ಹದ್ದಿ ಪೈಕೀ ತೊದಲಬಾಗಿ ಗ್ರಾಮದ ಬಸ್ಸ ಸ್ಟ್ಯಾಂಡ ಮುಂದಿನ ಡಾಂಬರ ರಸ್ತೆ ಮೇಲೆ ಆರೋಪಿ ನಂ-1 ಮೌಲಾಸಾಬ ಇತನು ನಡೆಸುತ್ತಿದ್ದ ಟ್ರ್ಯಾಕ್ಟರ ನಂ-ಕೆಎ-28/ಟಿಬಿ-4370, ಟೇಲರ ನಂ-ಕೆಎ-48/ಟಿ-2218, 2217 ನೇದ್ದರ ಟ್ರಾಲೀಗಳನ್ನು ಕಬ್ಬು ಲೋಡು ಮಾಡಿಕೊಂಡು ಟ್ರ್ಯಾಲಿಗಳಿಗೆ ಇನ್ಸೂರನ್ಸ ಇಲ್ಲದೇ ಚಿಕ್ಕಲಕಿ ಕ್ರಾಸ ಕಡೆಯಿಂದ ಸಾವಳಗಿ ಕಡೆಗೆ ನಡೆಸಿಕೊಂಡು ಬಂದು ತೊದಲಬಾಗಿ ಬಸ್ಸ ಸ್ಟ್ಯಾಂಡ ಮುಂದೆ ಹೊಸದಾಗಿ ರಸ್ತೆ ನಿರ್ಮಾಣ ಮಾಡುತ್ತಿದ್ದು, ರಸ್ತೆ ಮೇಲಿನ ಗರಸಿನ ಗುಂಪಿಗಳನ್ನು ನೋಡಿಯು ವಾಹನವನ್ನು ನಿಧಾನವಾಗಿ ನಡೆಸದೇ ಅತೀ ಜೋರಾಗಿ ಅಲಕ್ಷತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿ ಸಂತೆಗೆ ಬಂದ ಜನರ ಮೇಲೆ ಎರಡೂ ಟ್ರ್ಯಾಲಿಗಳನ್ನು ಎಡಹೋಳು ಮಗ್ಗಲಾಗಿ ಕೆಡವಿ ಅಪಘಾತಪಡಿಸಿ 1) ಅನೀಲಕುಮಾರ ನಾಗಪ್ಪ ಬಕಾಟೆ, ವಯಾಃ45 ವರ್ಷ, ಸಾಃ ವಿಜಯಪೂರ, ಆದರ್ಶ ನಗರ 2) ಅಫಜಲಹುಸೇನ ಇನ್ನಾಸುಲ್ಲಾ ಖುರೇಶಿ, ವಃ 28 ವರ್ಷ, ಸಾಃ ಲೋನಾವಾ ದರ್ಗಾ ಜಮಖಂಡಿ,3)ಮಲ್ಲಪ್ಪ ಸಾಬು ಸಂಗಾಪೂರ,ವಃ70 ವರ್ಷ,4) ಮಹಾದೇವಿ ಗಂಡ ಬಸಪ್ಪ ಸೊನ್ನದ, ವಃ 30 ವರ್ಷ, 5) ಚೈತು ಉರ್ಫ ಗಾಯತ್ರಿ ಗಂಡ ರಾಜಶೇಖರ ಚಟ್ಟೇರ, ವಃ 25, ಸಾಃ ಎಲ್ಲರೂ ತೊದಲಬಾಗಿ, 6) ತಂಗೆವ್ವಾ ಗಂಡ ಭೀಮಪ್ಪ ಡಪಳಾಪೂರ, ವಃ 60 ಸಾಃಗದ್ಯಾಳ, 7) ಸುಲೋಚನಾ ಉರ್ಫ ಸುಜಾತಾ ಗಂಡ ಯಲ್ಲಪ್ಪ ಭಜಂತ್ರಿ, ವಃ 40, ಸಾಃಬಿದರಿ, 8) ಮಹಾಬೂಬಿ ಉರ್ಫ ಮಮತಾಜ ಗಂಡ ಅಲ್ಲಾಭಕ್ಷ ಮಗರೆ, ವಃ35, ಸಾಃ ನಂದ್ಯಾಳ 9) ಅಮ್ಮಾಬಿ ಗಂಡ ಬಾಷಾಸಾಬ ಮುಲ್ಲಾ, ವಃ 65, ಸಾಃ ಕುಮಟೆ ಇವರಿಗೆ ಭಾರಿ ಗಾಯಪಡಿಸಿ, ಸಾಃ ಸೇ ನಂ-40-ಶಂಕರ, 43-ಸುಮಿತ್ರಾ, 44-ಲಕ್ಷ್ಮೀ, 45-ಮಹಾಬೂಬಿ, 46-ಹಮೀದಾ ಇವರಿಗೆ ಭಾರಿ ಗಾಯಪಡಿಸಿ ಟ್ರ್ಯಾಕ್ಟರನ್ನು ಅಲ್ಲಿಯೇ ಬಿಟ್ಟು ಅಪಘಾತ ಸಂಗತಿಯನ್ನು ಠಾಣೆಗೆ ತಿಳಿಸದೇ ಓಡಿ ಹೋಗಿದ್ದು, ಆರೋಪಿ ನಂ-2 ಬಾಶಾಸಾಬ ಇತನು ಅಪಘಾತಪಡಿಸಿದ ಟ್ರ್ಯಾಕ್ಟರದ ಮಾಲೀಕನಿದ್ದು, ಟ್ರ್ಯಾಲಿಗಳನ್ನು ಇನ್ಸುರನ್ಸ ಇಲ್ಲದೇ ಆರೋಪಿ ನಂ-1 ಮೌಲಾಸಾಬ ಇತನಿಗೆ ಟ್ರ್ಯಾಕ್ಟರ ನಡೆಸಲು ಕೊಟ್ಟಿದ್ದು, ಆರೋಪಿ ನಂ-3 ಮಹಾದೇವ ಇತನು ಘಟನಾ ಸ್ಥಳದಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ರಸ್ತೆ ಕಾಮಗಾರಿಯನ್ನು ಹಿಡಿದ ಕಂಟ್ರ್ಯಾಕ್ಟರನಿದ್ದು, ರಸ್ತೆ ಕಾಮಗಾರಿ ಮುಗಿಯುವವರೆಗೆ ವಾಹನಗಳ ಸಂಚಾರಕ್ಕೆ

ಇನ್ನೊಂದು ಸರಿಯಾದ ರಸ್ತೆಯನ್ನು ನಿರ್ಮಿಸದೇ ಕಾಮಗಾರಿ ನಡೆದ ಬಗ್ಗೆ ಫಲಕಗಳನ್ನು ಹಾಕದೇ ರಸ್ತೆ ಮೇಲೆ ಗರಸಿನ ಗುಂಪಿಗಳನ್ನು ಹಾಕಿ ರಸ್ತೆಯ ಸುಗಮ ಸಂಚಾರಕ್ಕೆ ಅಡೆ ತಡೆ ಮಾಡಿ ಅಪಘಾತಕ್ಕೆ ಕಾರಣಿಬೂತರಾಗಿದ್ದು, ಆ ಮೂಲಕ ಭಾ ದಂ ಸಂ ಕಲಂ-279, 337, 338, 304(ಎ), 283 ಮತ್ತು 146 ಸಹವಾಚಕ 196, 187 ಮೋಟಾರು ವಾಹನ ಕಾಯ್ದೆ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾ ದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಪ್ರಶ್ನೆ -1) ಮೇಲೆ ಓದಿ ಹೇಳಿದ ಆಪಾದನೆಯು ತಿಳಿಯಿತೋ ಹೇಗೆ ?

ಉತ್ತರ - 1-ತಿಳಿಯಿತು

2-ತಿಳಿಯಿತು

3-ತಿಳಿಯಿತು

ಪ್ರಶ್ನೆ - 2) ಸದರಿ ಆರೋಪಿಯ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೋ ?

ಉತ್ತರ- 1-ವಿಚಾರಣೆಯಾಗಬೇಕು.

2-ವಿಚಾರಣೆಯಾಗಬೇಕು.

3-ವಿಚಾರಣೆಯಾಗಬೇಕು.

(ಸದರಿ ಆರೋಪಿಯ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಅವನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ತಿಳಿಸಿ ನಂತರ ಅವನ ಸಹಿಯನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)

ಓ. ಹೇ. ಕೇ. ಸರಿ. ಇದೆ.

ಸಹಿ/-

ಪ್ರಧಾನ ಜೆ ಎಂ ಎಫ್ ಸಿ ಜಮಖಂಡಿ.

ಆರೋಪಿ ನಂ-1 ಸಹಿ

ಆರೋಪಿ ನಂ-2 ಸಹಿ

ಆರೋಪಿ ನಂ-3 ಸಹಿ